ಬಹುತೇಕವಾಗಿ ಸಂಪುಟದ ತೀರ್ಮಾನವಾಗಿದೆ. ಅದಷ್ಟು ಜಾಗ್ರತೆಯಾಗಿ ಇವರನ್ನು ಕೆಲಸಕ್ಕೆ ತೆಗೆದು ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

(V) ನಿರುದ್ಯೋಗಿ ಪಶುವೀಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವುದು

ಶ್ರೀ ಬಾಬುರೆಡ್ಡಿ ವೆಂಕಪ್ಪ ತುಂಗಳ್ (ಬೀಳಗಿ).—ಮಾನ್ಯ ಅಧ್ಯಕ್ಷರೇ, ೧೯೮೩ನೇ ನವೆಂಬರ್ ತಿಂಗಳಲ್ಲಿ ಒಂದು ವರ್ಷದ ಅವಧಿಯ ಪಶುವೀಕ್ಷಕರ ತರಬೇತಿಯನ್ನು ಪೂರ್ಣಗೊಳಿಸಿ ಜೂನ್ ೧೯೮೪ರಲ್ಲಿ ಈ ರೀತಿ ತರಬೇತಿ ಪಡೆದವರ ಸಂದರ್ಶನ ನಡೆದು ಉಳಿದವರನ್ನೆಲ್ಲಾ ಅದೇ ವರ್ಷದ ಆಗಸ್ಟ್ ತಿಂಗಳಲ್ಲಿ ಪಶುವೀಕ್ಷಕರ ಹುದ್ದೆಗೆ ಆಯ್ಕೆ ಮಾಡಲಾಯಿತು.

ಹಲವಾರು ಜನರು ತರಬೇತಿ ಪಡೆದು ಆಯ್ಕೆಗಾಗಿ ಅರ್ಹರಿದ್ದರೂ ಮತ್ತು ಇಲಾಖೆಯಲ್ಲಿ ಅನೇಕ ಹುದ್ದೆಗಳು ಖಾಲಿ ಇದ್ದರೂ ಅವರು ಆಯ್ಕೆಯಾಗಿಲ್ಲ. ಈ ಜನರ ಆಯ್ಕೆಯ ಬಗ್ಗೆ ಸರಕಾರ ಈವರೆಗೆ ಯಾವುದೇ ಸೂಚನೆ ಅಥವಾ ಆದೇಶವನ್ನು ನೀಡಿಲ್ಲದಿರುವುದು ದುರ್ದೈವದ ಸಂಗತಿ.

ತರಬೇತಿ ಮುಗಿದು ಒಂದೂವರೆ ವರ್ಷ ಕಳೆದಿದ್ದರೂ ತರಬೇತಿ ಪಡೆದವರು ನಿರುದ್ಯೋಗಿಗಳಾಗಿ ಕಾಲ ಕಳೆಯುವುದು ಇಂದಿನ ದಿನಗಳಲ್ಲಿ ಬಹಳ ಕಷ್ಟ ಎಂಬುದು ತಮಗೂ ಗೊತ್ತು. ಕಾರಣ ಅವರ ತೊಂದರೆಗಳನ್ನು ಗಮನಿಸಿ ತರಬೇತಿ ಪಡೆದ ಪಶುವೀಕ್ಷಕರಿಗೆ ನೇಮಕಾತಿ ಆಜ್ಞೆಗಳನ್ನು ಈ ಕೂಡಲೇ ಮಾಡಬೇಕೆಂದು ನಾನು ತಮ್ಮ ಮೂಲಕ ಸನ್ಮಾನ್ಯ ಪಶುಸಂಗೋಪನಾ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಪಶುಸಂಗೋಪನೆ, ವಿಜ್ಞಾನಿಗಾರಿಕೆ ಮತ್ತು ರೇಷ್ಮೆ ಖಾತೆಯ ಸಚಿವರು).—ಮಾನ್ಯ ಅಧ್ಯಕ್ಷರೇ ತಮ್ಮ ಅನುಮತಿಯನ್ನು ಪಡೆದು ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ.

೧೯೮೩ರ ನವಂಬರ್ ತಿಂಗಳಲ್ಲಿ ಒಂದು ವರ್ಷದ ಪಶು ಪರೀಕ್ಷಕರ ತರಬೇತಿ ಪೂರ್ತಿಗೊಳಿಸಿದ ಅಭ್ಯರ್ಥಿಗಳ ಪೈಕಿ ಇಲಾಖಾ ನೇಮಕಾತಿ ಸಮಿತಿಯು ೩೬೫ ಅಭ್ಯರ್ಥಿಗಳನ್ನು ಪಶು ಪರೀಕ್ಷಕರ ಹುದ್ದೆಗಳಿಗೆ ಆಯ್ಕೆ ಮಾಡಿತ್ತು. ಈ ರೀತಿ ಆಯ್ಕೆ ಮಾಡಲಾದ ೩೬೫ ಅಭ್ಯರ್ಥಿಗಳ ಪೈಕಿ ಒಟ್ಟು ೩೨೨ ಅಭ್ಯರ್ಥಿಗಳನ್ನು ದಿನಾಂಕ ೧೦-೭-೮೬ರಂದು ಮತ್ತು ೨೨-೮-೮೬ರಂದು ಖಾಲಿ ಇದ್ದ ಹುದ್ದೆಗಳಿಗೆ ನೇಮಿಸಿಕೊಳ್ಳಲಾಯಿತು. ಸಧ್ಯದಲ್ಲಿ ಇಲಾಖೆಯಲ್ಲಿ ಕೇವಲ ೧೬ ಸದರಿ ಹುದ್ದೆಗಳು ಮಾತ್ರ ಖಾಲಿ ಇದ್ದು ಇಲಾಖೆಯು ಕೆಲವು ಯೋಜನೇತರ ಕಾರ್ಯಕ್ರಮಗಳನ್ನು ಕೈಬಿಡುವುದರಿಂದ ಆ ಸಿಬ್ಬಂದಿಯಂ ವರನ್ನು ಈ ಖಾಲಿ ಹುದ್ದೆಗಳಿಗೆ ವರ್ಗಾಯಿಸಲು ವಿಂಗಡಿಸಲಾಗಿದೆ.

ಉಪಾಧ್ಯಕ್ಷರು.—ಈಗ ಶೂನ್ಯವೇಳೆಯ ನಿಯಮದ ಮೇಲೆ ವಿಷಯ ಮುಕ್ತಾಯವಾಯಿತು. ಈಗ ಆಯುಷ್ಯದ ಮೇಲೆ ಚರ್ಚೆ. ಶ್ರೀಮತಿ ನಾಗರತ್ನಮ್ಮನವರು ಪ್ರಾರಂಭ ಮಾಡಬೇಕು.

೧೯೮೭-೮೮ರ ಆಯುವ್ಯಯದ ಮೇಲಿನ ಚರ್ಚೆ

ವಿತ್ತೀಯೇತರ ಕಾರ್ಯಕಲಾಪಗಳು

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಉಪಾಧ್ಯಕ್ಷರೇ, ನಮ್ಮ ಮುಖ್ಯಮಂತ್ರಿಗಳು ಮತ್ತು ಫೈನಾನ್ಸ್ ಮಿನಿಸ್ಟರ್ ಆದ ಶ್ರೀ ರಾಮಕೃಷ್ಣ ಹೆಗಡೆಯವರು ೧೯೮೭-೮೮ನೇ ಸಾಲಿನ ಈ ಬಜೆಟ್ ಇಟ್ಟಾಗ ಅವರು ಒಂದು ವಾಕ್ಯವನ್ನು ಹೇಳಿದ್ದಾರೆ. ''ತಾವು ಈ ಪಂಚಾಯತ್ ರಾಜ್ಯ ಮೆಂಬರ್ಸ್‌ಗಳನ್ನೆಲ್ಲಾ ನೋಡಿದೆವು, ಅವರನ್ನು ನೋಡಿ ಬಹಳ ಸಂತೋಷವಾಯಿತು. ಅವರ ಕಣ್ಣಲ್ಲಿ ಮೆರಗು ಮಿಂಚುತ್ತಿತ್ತು, ಅವರನ್ನು ನೋಡಿದ ತಕ್ಷಣ ನನಗೆ ಬಹಳ ಉಲ್ಲಾಸವಾಯಿತು'' ಹಾಗೆ ನಾನಾ ತರವಾಗಿ ವಿವರಿಸಿಕೊಂಡಿದ್ದಾರೆ. ಆ ಜನಗಳನ್ನು ನೋಡುವಂಥ ಭಾಗ್ಯ ನನಗೂ ಬಂದಿತ್ತು. ಆ ಜನಗಳನ್ನು ಎಂದರೆ, ಆ ಎಲೆಕ್ಟೆಡ್ ರೆಪ್ರೆಸೆಂಟೇಟಿವ್ಸ್‌ಗಳನ್ನು ನೋಡಿದಾಗ ನನಗೆ ಹೇಗಾಯಿತು ಎಂದರೆ, ಅವರ ಕಣ್ಣಲ್ಲಿ ಯಾವ ತರದ ಕಾಂತಿಯೂ ಇರಲಿಲ್ಲ. ಅವರ ಕಣ್ಣಲ್ಲಿ ಬರೀ ಸುಸ್ತು ಕಾಣು